'ನಾ ಎಂಥ ಮಳ್ಳ ಮಾರಾಯಾ, ವಿಷ್ಯ ನಿಂಗ್ ಗೊತ್ತಿದೆ ಅಂದ್ಕಂಡೆ. ಸಾವಿತ್ರಕ್ಕ ಹೇಳಿದ್ದಾಳು ಅಂತ ತಿಳ್ದೆ. ನಮ್ಮ ಕವಿತಾಗೆ ಲಗ್ನ ನಿಕ್ಕಿ ಆಯ್ತೊ. ಹುಡುಗ ಹುಬ್ಬಳಿಲೀ ಯಾವ್ದೋ ಬ್ಯಾಂಕ್‌ಲ್ಲಿ ಇದ್ನಂತಪಾ; ನಮ್ಮನೆವಳ ಹತ್ತಿರದ ನೆಂಟರು. ಹೋದರ್ಷ ಯಾವ್ದೋ ನೆಂಟರ ಮದ್ವೇಲಿ ಕವಿತಾನ್ನ ನೋಡಿದ್ನಂತೆ. ಅವರಾಗೇ ಕೇಳ್ಕಂಡ ಬಂದ್ರು. ಕವಿತಾ ಮೊದ್ಲು ಒಪ್ಪಿಲ್ವಾ, ಹಟ ಮಾಡ್ತು, ಪುಣ್ಯ ಕೊನಿಕೂ ಅಡ್ಡಿಲ್ಲಾ ಅಂತು' ಎನ್ನುತ್ತಿದ್ದ ಗೋವಿಂದಣ್ಣನ ಮುಂದಿನ ಮಾತುಗಳು ಮನೋಹರನ ಕಿವಿಯೊಳಕ್ಕೆ ಹೋಗಿರಲಿಲ್ಲ. ಒಂದುಕ್ಷಣ ಬುದ್ಧಿಗೆ ಕತ್ತಲು ಕವಿದಂತಾಗಿತ್ತು. ದೇಹ, ಮನಸ್ಸಿನ ಚೈತನ್ಯವೇ ಬತ್ತಿಹೋದಂತೆ ನಿಷ್ಚೇಷ್ಟಿತನಾಗಿಬಿಟ್ಟ. ಅಷ್ಟು ಹೊತ್ತಿಗೆ ಸಾವಿತ್ರಿ ಏನೋ ಕೇಳಿದ್ದಕ್ಕೆ ಅತ್ತ ತಿರುಗಿದ ಗೋವಿಂದಣ್ಣ ಅವಳತ್ತ ಗಮನ ಕೊಟ್ಟಿದ್ದರಿಂದ ಮನೋಹರನ ಸ್ಥಿತಿಯನ್ನ ಆತ ಗಮನಿಸಲಾಗಲಿಲ್ಲ. ಕ್ಷಣದಲ್ಲಿ ಚೇತರಿಸಿಕೊಂಡ ಮನೋಹರ ಸಾವರಿಸಿಕೊಳ್ಳುತ್ತ ಅಡುಗೆಮನೆಗೆ ಹೋಗಿ ಚೊಂಬಿನಿಂದ ನೀರನ್ನೆತ್ತಿ ಕುಡಿದ.

ಮನಸ್ಸು ಶೂನ್ಯವಾದ, ಜಗತ್ತು ಸ್ತಬ್ಧವಾಗಿದೆ ಎನ್ನುವ ಸ್ಥಿತಿಯಲ್ಲಿ ನಿಂತೇ ಇದ್ದ ಮಗನನ್ನು ಸಾವಿತ್ರಿಯೇ ಕರೆದು ಎಚ್ಚರಿಸಿದಳು. ಹೊರಗೆ ಬಂದ ಮನೋಹರನ ಮುಖಭಾವವನ್ನ ನಿಚ್ಚಳ ಬೆಳಕಿಲ್ಲದ ಆ ಜಗಲಿಯಲ್ಲಿ ಇಬ್ಬರೂ ಗುರ್ತಿಸಲಿಲ್ಲ. 'ನಿನ್ನಿಂದ ಉಪಕಾರ ಆಗ್ಬೇಕು ಮಾರಾಯಾ, ನಮ್ಮ ಹೊಸನೆಂಟರಿಗೆ ಗ್ರಾಂಡ್ ಡೆಕೋರೇಷನ್ ಆಗ್ಬೇಕಂತೆ, ಮದುವೆ ಮಂಟಪದ್ದು. ಅದ್ನ ನೀನೇ ಮಾಡ್ಕೊಡುದೇಯಾ, ಮನೆಮಂದಿ ಹಾಂಗಿದ್ದ ನಿನ್ನ ಬಿಟ್ಟು ನಾನ ಯಾರನ್ನೂ ಕೇಳ್ಲಾರೆ. ಮೊದ್ಲೇ ಹೇಳುವಾ ಅಂತಾ ಬಂದೆ. ನೆಂಟರನ್ನ ಕಳಿಸಿ ಇನ್ನ ಮನೀಗೆ ಹೋಗಿಲ್ವೋ. ಮತ್ತೆ ಮಾತಾಡ್ವಾ, ಸಾವಿತ್ರಕ್ಕ ಬತ್ತೆ' ಎಂದು ಗೋವಿಂದಣ್ಣ ಹೋಗಿದ್ದ.

ಊಟಕ್ಕೆ ಕುಳಿತಾಗಲೂ ಮನೋಹರ, ಆತನ ತಂಗಿ ಶುಭಾ, ಸಾವಿತ್ರಿ ಪರಸ್ಪರ ಮಾತೇ ಆಡಲಿಲ್ಲ. ಮನೆಯೊಳಗಿನ ಮೂವರದ್ದೂ ಮೌನ; ಗೋವಿಂದಣ್ಣ ಹೋದನಂತರ ಕೆಲವೇ ಕೆಲವು ಕ್ಲುಪ್ತ ಮಾತುಗಳನ್ನ ಬಿಟ್ಟರೆ ತನ್ನೊಳಗಿನ ತುಮುಲವನ್ನ ಅವರಿಗೆ ತೋರಗೊಡಬಾರದು ಎನ್ನುವ ಪ್ರಯತ್ನ ಆತನದ್ದಾದರೂ ಅದು ಸಾಧ್ಯವಾಗುತ್ತಿರಲಿಲ್ಲ.

ಅವತ್ತು ಮನೆಗೆ ಬಂದಾಗಿನಿಂದ ಅಲ್ಲಿನ ವಾತಾವರಣ ಎಂದಿನಂತಿಲ್ಲ ಅನಿಸುತ್ತಿತ್ತು. ಎದ್ದು ಕಾಣದ ವಿಷಾದ ಹರಡಿಕೊಂಡಿರುವಂತೆ ಭಾಸವಾಗಿತ್ತು. ಅಣ್ಣ ಬಂದ ಕೂಡಲೇ ಎಷ್ಟೇ ಅಭ್ಯಾಸದಲ್ಲಿದ್ದರೂ ಒಂದುಕ್ಷಣ ಆತನ ಮುಖ ನೋಡಿ ಮಾತನಾಡಿಸುತ್ತಿದ್ದ ಶುಭಾ ಒಳಕೋಣೆಯಲ್ಲಿ ಓದುತ್ತಿದ್ದಲ್ಲೇ 'ಅಣ್ಣಾ' ಎಂದಿದ್ದು ಬಿಟ್ಟರೆ ಮತ್ತೆ ಮಾತಿರಲಿಲ್ಲ. ಮಗನಿಗೆ ಆಸರಿಗೆ ಬೇಕೆನೋ ಎಂದಷ್ಟೇ ಕೇಳಿದ ಸಾವಿತ್ರಿ ಅಡುಗೆಕೋಣೆಯಲ್ಲಿ ಏನೋ ಕೆಲಸ ಮಾಡಿಕೊಳ್ಳುತ್ತಿದ್ದಳು. ದೇಹಕ್ಕೆ ಎಷ್ಟೇ ಶ್ರಮವಾಗಲೀ, ಮನಸ್ಸಿಗೆ ಎಂಥದ್ದೇ ಸಂಕಟವಿರಲಿ ಅದನ್ನ ಮಕ್ಕಳಿಗೆ ಕಾಣಿಸದಂತೆ ಅವರನ್ನ ಗೆಲುವಿನಲ್ಲಿಡುತ್ತಿದ್ದಳು ಸಾವಿತ್ರಿ. ಬೆಳೆಯುವ ಮಕ್ಕಳ ಮನಸ್ಸು ಕುಗ್ಗಬಾರದು ಎನ್ನುವದು ಅವಳ ಉದ್ದೇಶ. ಮಕ್ಕಳು ಅನುಭವಿಸಿದ ಬಡತನ, ಹಸಿವು, ಅಸಹಾಯಕತೆಗಳು ಅವರ ಬದುಕನ್ನ ಬೆಳೆಸುತ್ತವೆ. ಆದರೆ ಮನಸ್ಸು ಮುದುಡಿಕೊಂಡರೆ ಬೆಳವಣಿಗೆ ಕುಂಟುತ್ತದೆ ಎಂದು ಆಕೆ ತನ್ನದೇ ಆದ ಪರಿಭಾಷೆಯಲ್ಲಿ ಅರಿತಿದ್ದಳು. ಪರಸ್ಪರ ಮನಸ್ಸು ಅರಿತುಕೊಂಡವರಂತೆ ಮೂವರು ಹೆಚ್ಚು ಮಾತನಾಡದೇ ಊಟ, ಕಸಮುಸುರೆ ಮುಗಿಸಿ ಮಲಗಿಕೊಂಡಿದ್ದರು.

ರಾತ್ರಿಯೆಲ್ಲ ಮನೋಹರ ವಿಹ್ವಲನಾಗಿ ಒದ್ದಾಡಿದ್ದ. ಕವಿತಾಳ ಮದುವೆ ಎನ್ನುವದು ಅವನಿಗೆ ಬರಸಿಡಿಲನಂತೆ ಬಡಿದಿತ್ತು. ಮನಸ್ಸಿನಾಳದ ಯಾತನೆ ಹೊಕ್ಕುಳ ತುದಿಯನ್ನು ಕೊರೆಯುವಂತ, ಹೇಳಿಕೊಳ್ಳಲಾಗದ, ಅನುಭವಿಸಲಾಗದ ತಲ್ಲಣದಲ್ಲಿ ರಾತ್ರಿಯೆಲ್ಲ ತೊಳಲಾಡಿದ. ಆಚೆ ಕೋಣೆಯಲ್ಲಿ